<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾಧಂ.,ರವರ ನ್ಯಾಯಾಲಯಃ ನ.ರಾ.ಪುರ</u>

<u>ಸಿ.ಸಿ. ನಂಃ **21/2021**</u>

<u>ಫಿರ್ಯಾದುದಾರರು</u> ಸರ್ಕಾರದ ಪರವಾಗಿ ವಲಯಾರಣ್ಯಾಧಿಕಾರಿಗಳು,
ನ ರಾ ಪುರ ವಲಯ.

:ವಿ:

<u>ಆರೋಪಿ</u> : ಲೋಕೇಶ್ ಯಾನೆ ಲೋಕಿ
ಬಿನ್ ಸಿದ್ದಪ್ಪ,
ವಾಸಃ ಜನತಾ ಕಾಲೋನಿ, ಕಡಹಿನಬೈಲು ಗ್ರಾಮ,
ನ ರಾ ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

<u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ **313** ರ ಪ್ರಕಾರ ಆರೋಪಿ ಹೇಳಿಕೆ</u>

ಪ್ರಃ1: ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದೀರಾ?

ಉಃಆಃ ಕೇಳಿದ್ದೀನಿ

ಪ್ರಃ2: ಫ್ರಾಸಾ 1 ಸೀನಪ್ಪ, ನಿವೃತ್ತ ಉಪವಲಯ ಅರಣ್ಯಾಧಿಕಾರಿಗಳು, ರಾವೂರು ಮತ್ತು ಫ್ರಾಸಾ-2 ಜಯಣ್ಣ, ಗಸ್ತು ಅರಣ್ಯ ಪಾಲಕ ರವರು ಹೇಳುತ್ತಾರೆ. ದಿಃ 9.2.2015 ರಂದು ಚಾಸಾ-4 ರವರಿಗೆ ಕಡಹಿನಬೈಲು ಬಳಿ ಸ.ನಂ.6 ರ ಜನತಾ ಕಾಲೋನಿಯಲ್ಲಿ ಲೋಕೇಶ್ ಎಂಬುವವರು ಜಿಂಕೆ ಮಾಂಸ ತಂದು ಬೇಹಿಸಿ ಇಟ್ಟಿರುತ್ತಾರೆ ಎಂದು ಮಾಹಿತಿ ರಾತ್ರಿ ಗಸ್ತಿನ ಸಿಬ್ಬಂದಿಗಳಾದ ನಮಗೆ ಮಾಹಿತಿ ಬಂದಿದ್ದು, ನಾವು ಅದೇ ದಿನ ಬೆಳಿಗ್ಗೆ 5.30 ಗಂಟೆಗೆ ಇಲಾಖಾ ವಾಹನದಲ್ಲಿ ಹೋಗಿ ನೋಡಲಾಗಿ ಅದು ಲೋಕೇಶ್ ರವರ ಮನೆಯಾಗಿದ್ದು ಅವರ ಮನೆಗೆ ಹೋಗಿ ಕರೆದಾಗ ಸದರಿಯವರು ಬಂದಿದ್ದು ಮಾಹಿತಿಯನ್ನು ಅವರಿಗೆ ತಿಳಿಸಿ ಮನೆಯನ್ನು ಶೋಧಿಸಬೇಕು ಎಂದು ತಿಳಿಸಿದಾಗ ಅವರು ಶೋಧಿಸಿ ಎಂದು ನಮಗೆ ತಿಳಿಸಿದ ಮೇರೆಗೆ ನಾವು ಮನೆಯ ಒಳಗೆ ಹೋಗಿ ನೋಡಿದಾಗ ಅಲ್ಯೂಮಿನಿಯಂ ಇಡ್ಲಿ ಪಾತ್ರೆ ಒಲೆಯ ಮೇಲೆ ಇರುವುದು ಕಂಡುಬಂದಿರುತ್ತದೆ. ಅದರಲ್ಲಿ ಏನಿದೆ ಎಂದು ನೋಡುವಷ್ಟರಲ್ಲಿ ಆರೋಪಿ ಓಡಿ ಹೋಗಲು ಪ್ರಯತ್ನಸಿದ್ದು ಹಿಡಿಯಲು ಪ್ರಯತ್ನಿಸಿದ್ದು ಆದರೆ ಆರೋಪಿ ಸಿಕ್ಕಿರುವುದಿಲ್ಲ. ನಂತರ ವಾಪಾಸ್ ಬಂದು ಅಕ್ಕಪಕ್ಕದವರನ್ನು ಪಂಚರಾಗಿ ಸಹಕರಿಸಲು ಕೋರಿದ್ದು ಅವರು ನಿರಾಕರಿಸಿದ ಮೇರೆಗೆ ಇಲಾಖೆಯವರು ಪಂಚರಾಗಿ ಸದರಿ ಇಡ್ಲಿ ಪಾತ್ರೆಯನ್ನು ಪರಿಶೀಲೀಸಿದಾಗ ಅದರಲ್ಲಿ ಜಿಂಕೆ ಮಾಂಸವನ್ನು ಬೇಯಿಸಿ ಪದಾರ್ಥ ಮಾಡಿರುವುದು ಕಂಡುಬಂದಿರುತ್ತದೆ. ಅದನ್ನು

10-1-2?

ಟಿ೪೫೪೮

ಅಮಾನತ್ತುಪಡಿಸಿಕೊಂಡು ದೂರವಾಣಿ ಮೂಲಕ ಅರಣ್ಯ ತಕ್ಷೀರು ಸಂಃ 43/2014-15 ರನ್ನು ವಲಯ ಅರಣ್ಯಾಧಿಕಾರಿಗಳ ಕಚೇರಿಯಿಂದ ಪಡೆದುಕೊಂಡು ನಂತರ ಸದ್ರಿ ಇಡ್ಲಿ ಪಾತ್ರೆ ಮೇಲೆ ತಕ್ಷೀರು ಸಂಖ್ಯೆ ಮತ್ತು ಕ್ರಮ ಸಂಖ್ಯೆಃ 1 ಎಂದು ಬರೆದಿರುತ್ತೇವೆ. ಇದು ವನ್ಯಜೀವಿ ಸಂರಕ್ಷಣಾ ಕಾಯಿದೆ ವಿರುದ್ಧವಾದ್ದರಿಂದ ಆರೋಪಿ ವಿರುದ್ಧ ಚಾಸಾ-4 ರವರು ದೂರು ದಾಖಲೆ ಮಾಡಿರುತ್ತಾರೆ. ಈ ಸಂಬಂದ ಸ್ಥಳದಲ್ಲಿ ಪ್ರ.ವ.ವರದಿ, ಅಮಾನತ್ತು ವರದಿ, ಸ್ಥಳ ಮಹಜರ್ ಅನ್ನು ಮಾಡಿರುತ್ತೇವೆ. ನಂತರ ವಸ್ತುಗಳ ಸಮೇತ ನ.ರಾ. ಪುರ ವಲಯ ಅರಣ್ಯಾಧಿಕಾರಿಗಳ ಕಚೇರಿಗೆ ಬಂದಿರುತ್ತೇವೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಆಃ ಗೊ-ತ್ತಿ

ಪ್ರಃ3: ಫ್ರಾಸಾ-3 ಟಿ ಕೆ ಪ್ರಕಾಶ್, ನ ರಾ ಪುರ ರವರು ಹೇಳುತ್ತಾರೆ. ಅರಣ್ಯ ಕಚೇರಿಯಲ್ಲಿ ಈ ಪ್ರಕರಣದಲ್ಲಿ ಅರಣ್ಯ ಪೊಲೀಸರು ಜಪ್ತು ಮಾಡಿಕೊಂಡ ಜಿಂಕೆ ಮಾಂಸವನ್ನು ಬೆಳಗ್ಗೆ 8.30 ಗಂಟೆಗೆ ಸದರಿ ಮಾಂಸವನ್ನು ಸುಟ್ಟು ಹಾಕಿರುತ್ತಾರೆ. ಈ ಸಂಬಂಧ ನಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ ನಿಜ

ಪ್ರಃ4: ನಿಮಗೆ ಈ ಪ್ರಕರಣದ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ?

ಉಃಆಃ ಇಲ್ಲ

ಪ್ರಃ5: ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉಃಆಃ ಇಲ್ಲ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : ನೇ ದಿವಸ, ಮಾಹೆ, 2024.

[signature] 10-12-24

(ದಾಸರಿ ಕ್ರಾಂತಿ ಕಿರಣ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ನ.ರಾ. ಪುರ.

[signature]